# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆCIN:U40109KA2004SGC35177)


| | | |
|---|---|---|
| ದೂ.ಸಂ: .: 08230261237<br>Email: aeecesckrpet@gmail.com<br>Email: aeekrpet1@cescmysore.org | | ಕಛೇರಿ:<br>ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)<br>ಕಾರ್ಯ ಮತ್ತು ಪಾಲನಾ ಉಪವಿಭಾಗ-1 ಚಾವಿಸನಿನಿ<br>ಕೃಷ್ಣರಾಜಪೇಟೆ. ಪಿನ್.ಕೋಡ್:571426 |


ಸಂಖ್ಯೆ: ಸಕಾಇಂ(ವಿ)/ಸಇಂ(ತಾಂ)/2020-21/ 202-204 ದಿನಾಂಕ: 06-7-2020

## ಸಭಾ ನಡಾವಳಿ

ವಿಷಯ:-ದಿನಾಂಕ 22-06-2020 ರಂದು ಸಮಯ ಅಪರಾಹ್ನ 2:30 ರಿಂದ 5:30 ರವರೆಗೂ ನಡೆದಿದ್ದು ಕೆ.ಆರ್.ಪೇಟೆ ಉಪವಿಭಾಗ-1 ರ ಮೊದಲನೆ ತ್ರೈಮಾಸಿಕ ಜನಸಂಪರ್ಕ ಸಭೆಯನ್ನು ವಿಭಾಗೀಯ ಕಛೇರಿಯ ಆವರಣದಲ್ಲಿ ಕಾರ್ಯನಿರ್ವಾಹಕ ಇಂಜನಿಯರ್(ವಿ) ಕೆ.ಆರ್.ಪೇಟೆ ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

1.ಕಾರ್ಯನಿರ್ವಾಹಕ ಇಂಜನಿಯರ್(ವಿ)
2.ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ) ಉಪವಿಭಾಗ-1
3.ಪ್ರಭಾರ ಸಹಾಯಕ ಇಂಜನಿಯರ್(ತಾ) ಉಪವಿಭಾಗ-1
4.ಕಿರಿಯ ಇಂಜನಿಯರ್(ವಿ) ಅಕ್ಕಿಹೆಬ್ಬಾಳು ಶಾಖೆ
5.ಕಿರಿಯ ಇಂಜನಿಯರ್(ವಿ) ಬೂಕನಕೆರೆ ಶಾಖೆ
6. ಕಿರಿಯ ಇಂಜನಿಯರ್(ವಿ) ಶೀಳನೆರೆ ಶಾಖೆ
7. ಕಿರಿಯ ಇಂಜನಿಯರ್(ವಿ) ವಿಠಲಾಪುರ ಶಾಖೆ

| ಸಭೆಗೆ ಹಾಜರಿದ್ದ ಗ್ರಾಹಕರಿಂದ ಪಡೆದ ದೂರುಗಳು | ಸಂಬಂಧಪಟ್ಟ ಅಧಿಕಾರಿ /ಶಾಖೆ | ಹಿರಿಯ ಅಧಿಕಾರಿಗಳು ದೂರುಗಳಿಗೆ ಸ್ಥಳದಲ್ಲಿ ನೀಡಿದ ಉತ್ತರಗಳು ಮತ್ತು ಸೂಚನೆಗಳು |
|---|---|---|
| 1.ರಾಜೇಗೌಡ ಮುದಿಗೆರೆ ಫೋನ್ ನಂ:-9901704430 ರವರು ಮಾತನಾಡಿ ಜನಸಂಪರ್ಕ ಸಭೆಯ ಮಾಹಿತಿಯನ್ನು ಪತ್ರಿಕೆಗಳಲ್ಲದೆ ಕರಪತ್ರದ ಮೂಲಕ ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಸಬೇಕೆಂದು ಕೋರಿರುತ್ತಾರೆ. | ಶಾಖಾಧಿಕಾರಿಗಳು ಬೂಕನಕೆರೆ | ಮುಂದಿನ ಜನಸಂಪರ್ಕ ಸಭೆಯನ್ನು ಆಯೋಜಿಸುವಾಗ ಪತ್ರಿಕೆಗಳಲ್ಲದೆ ಕರಪತ್ರದ ಮೂಲಕ ಮಾಹಿತಿಯನ್ನು ತಿಳಿಸಲಾಗುವುದೆಂದು ಸ.ಕಾ.ಇಂ(ವಿ) ಉಪವಿಭಾಗ-1 ರವರು ತಿಳಿಸಿರುತ್ತಾರೆ. |
| 2.ರಾಜೇಗೌಡ ಮುದಿಗೆರೆ ಫೋನ್ ನಂ:-9901704430 ರವರು ಮಾತನಾಡಿ ಮಡುವಿನಕೊಡಿಯಲ್ಲಿ ಪರಿವರ್ತಕವು ಸುಟ್ಟಿ 15 ದಿನಗಳಾದರು ಬದಲಾಯಿಸಿರುವುದಿಲ್ಲ. ಬದಲಾಯಿಸಲು ತಕ್ಷಣ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. | ಶಾಖಾಧಿಕಾರಿಗಳು ಅಕ್ಕಿಹೆಬ್ಬಾಳು | ಪರಿವರ್ತಕಗಳು ಪರಿವರ್ತಕದ ದುರಸ್ಥಿಕೇಂದ್ರದಿಂದ ದುರಸ್ಥಿಗೊಂಡು ಬಂದಿರುತ್ತವೆ ಹಾಗೂ ಜೇಷ್ಠತಾ ಪಟ್ಟಿಯಲ್ಲಿ ಸದರಿಯವರ ಸರಧಿ ಇರುವುದರಿಂದ ನಾಳೆಯೆ ಬದಲಾಯಿಸಲು ಕ್ರಮಕೈಗೊಳ್ಳಲಾಗುವುದೆಂದು ಸ.ಕಾ.ಇಂ(ವಿ) ಉಪವಿಭಾಗ-1 ರವರು ತಿಳಿಸಿರುತ್ತಾರೆ. |
| 3.ರಾಜೇಗೌಡ ಮುದಿಗೆರೆ ಫೋನ್ ನಂ:-9901704430 ರವರು ಮಾತನಾಡಿ ವಿಫಲಗೊಂಡ ಪರಿವರ್ತಕಗಳನ್ನು ಬದಲಾಯಿಸಲು ಯಾರು ಹಣ ಪಡೆಯಬಾರದೆಂದು ಕೋರಿರುತ್ತಾರೆ. | ---- | ವಿಫಲಗೊಂಡ ಪರಿವರ್ತಕಗಳನ್ನು ಬದಲಾಯಿಸಲು ನಿಗಮದಿಂದ ಉಚಿತವಾಗಿ ಪರಿವರ್ತಕಗಳನ್ನು ಜೇಷ್ಠತಾ ಆಧಾರದ ಮೇಲೆ ನೀಡುತ್ತಿರುವುದರಿಂದ ಸಾರ್ವಜನಿಕರು ಹಣ ನೀಡಬಾರದೆಂದು ತಿಳಿಸಿರುತ್ತಾರೆ. |

Scanned by CamScanner

| | | |
|---|---|---|
| 4.ರಾಜೇಗೌಡ ಮುದಿಗೆರೆ ಫೋನ್ ನಂ:-9901704430 ರವರು ಮಾತನಾಡಿ ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಎರಡು ಹೊಸ IP ಸ್ಥಾವರಗಳಿಗೆ ಒಂದು ಹೊಸ ಪರಿವರ್ತಕವನ್ನು ಅಳವಡಿಸಿಕೊಡುವ ಯೋಜನಯನ್ನು ಸಾರ್ವಜನಿಕರ ಗಮನಕ್ಕೆ ತರುವಂತ ಕೋರಿರುತ್ತಾರೆ. | ---- | ನಿಗಮದ ವತಿಯಿಂದ ಎರಡು IP ಸ್ಥಾವರಗಳಿಗೆ ಒಂದು ಪರಿವರ್ತಕವನ್ನು ಅಳವಡಿಸಿಕೊಡುವ ಯೋಜನೆಯು ಈಗಾಗಲೇ ಚಲ್ತಿಯಲ್ಲಿದ್ದು ಸಾರ್ವಜನಿಕರು ಈ ಯೋಜನಯ ಸುಪಯೋಗ ಪಡಿಸಿಕೋಳ್ಳುವಂತೆ ಕಾ.ಇಂ(ವಿ)ರವರು ಸಭಯಲ್ಲಿ ತಿಳಿಸಿದರು. |
| 5.ಪ್ರಕಾಶ್ ಕ.ಆರ್.ಪೇಟೆ ಫೋನ್ ನಂ:-9743299271 ರವರು ಮಾತನಾಡಿ ನಮ್ಮ ಜಮೀನಿನಲ್ಲಿ ಕಳವಾಗಿರುವ ವಿದ್ಯುತ್ ತಂತಿಯನ್ನು ಪೋಲೀಸ್ ಇಲಾಖೆಗೆ ದೂರು ನೀಡಿ ಕಳವಾಗಿರುವ ವಿದ್ಯುತ್ ತಂತಿಯನ್ನು ಕೊಡಿಸಿಕೊಡಬಕಾಗಿ ಕೋರಿರುತ್ತಾರ. | ಶಾಖಾಧಿಕಾರಿಗಳು ಶೀಳನೆರೆ | ವಿದ್ಯುತ್ ತಂತಿ ಕಳ್ಳತನವಾಗಿರುವುದಕ್ಕೆ ಪೋಲೀಸ್ ದೂರು ನೀಡಿ FIR ಪ್ರತಿ ಪಡೆದು ಅಂದಾಜು ಪಟ್ಟಿ ತಯಾರಿಸಿ ವಿದ್ಯುತ್ ಮಾರ್ಗವನ್ನು ಎಳೆದುಕೊಡುವಂತೆ ಶಾಖಾಧಿಕಾರಿಗಳಿಗೆ ತಿಳಿಸಲಾಯಿತು. |
| 6.ಬೂಕನಕೆರೆಯಲ್ಲಿ 7.5 ಮೀ ಎತ್ತರವಿರುವ ಕಂಬಗಳನ್ನು ಬದಲಾಯಿಸುವಂತೆ ಕೋರಿರುತ್ತಾರೆ | ಶಾಖಾಧಿಕಾರಿಗಳು ಬೂಕನಕೆರೆ | ಬೂಕನಕೆರೆ ಗ್ರಾಮದಲ್ಲಿ 7.5 ಮೀ ಎತ್ತರವಿರುವ ಕಂಬಗಳನ್ನು ಬದಲಾಯಿಸಲು ಅಂದಾಜು ಪಟ್ಟಿ ತಯಾರಿಸಿ ವಿಭಾಗಿಯ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಯಿತು. |
| 7.ರಾಜೇಗೌಡ ಮುದಿಗೆರೆ ಫೋನ್ ನಂ:-9901704430 ರವರು ಮಾತನಾಡಿ ಶಾಖಾಧಿಕಾರಿಗಳು ಹಾಗೂ ಗುತ್ತಿಗೆದಾರರು ಇಬ್ಬರು ಶಾಮೀಲಾಗಿಸಾರ್ವಜನಿಕರ ಹತ್ತಿರ ಅಕ್ರಮವಾಗಿ ಹಣ ವಸೂಲಿ ಮಾಡುವಾಗ ಪ್ರತ್ಯಕ್ಷವಾಗಿ ಹಿಡಿದು ಕೊಟ್ಟಾಗ ಅವರುಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ. | ---- | ಅಕ್ರಮವಾಗಿ ಶಾಖಾಧಿಕಾರಿಗಳು ರೈತರಿಂದ ಹಣ ಪಡೆಯುತ್ತಿರುವುದು ಸಾಬಿತಾದಲ್ಲಿ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. |
| 8.ನಾಗರಾಜು ಅಗ್ರಹಾರಬಾಚಹಳ್ಳಿ ಫೋನ್ ನಂ:-9880762980 ರವರು ಮಾತನಾಡಿ ಗ್ರಾಮದಿಂದ ಹೊರಭಾಗದಲ್ಲಿರುವ ಸುಮಾರು 20 ಮನೆಗಳಿಗೆ ಒಂದು ಪರಿವರ್ತಕವನ್ನು ಅಳವಡಿಸಿಕೊಡಿವಂತೆ ಕೋರಿರುತ್ತಾರೆ. | ಶಾಖಾಧಿಕಾರಿಗಳು ಶೀಳನೆರೆ | ಸದರಿಯವರು ತಿಳಿಸಿರುವ ಸಂಬಂಧ ಸ್ಥಳ ಪರಿಶೀಲಿಸಿ ಅಗತ್ಯವಿದ್ದಲ್ಲಿ ಪ್ರತ್ಯೇಕ ಪರಿವರ್ತಕ ಅಳವಡಿಸಲು ಅಂದಾಜು ಪಟ್ಟಿ ತಯಾರಿಸುವಂತೆ ಶಾಖಾಧಿಕಾರಿಗಳಿಗೆ ತಿಳಿಸಲಾಯಿತು. |
| 9.ನಂಜುಂಡಪ್ಪ ಮೆಲ್ಲಹಳ್ಳಿ ಫೋನ್ ನಂ:-8105261049 ರವರು ಮಾತನಾಡಿ ನಮ್ಮ ಭಾಗದಲ್ಲಿ ಹಾಲಿ ಇರುವ ಮಾರ್ಗಗಳು 4 ACSR ನಿಂದ ಕೂಡಿದ್ದು ಹಲವಾರು ಭಾರಿ ತುಂಡಾಗಿ ಬಿಳುತ್ತಿರುವುದರಿಂದ ಸದರಿ ತಂತಿಯನ್ನು ಬದಲಾಯಿಸುವಂತೆ ಕೋರಿರುತ್ತಾರೆ. | ಶಾಖಾಧಿಕಾರಿಗಳು ಅಕ್ಕಿಹೆಬ್ಬಾಳು | ಸದರಿಯವರ ದೂರು ಸಂಬಂಧ ಸ್ಥಳ ಪರಿಶೀಲಿಸಿ ಹಾಲಿ ಇರುವ ವಾಹಕವನ್ನು ಬದಲಾಯಿಸಲು ಅಂದಾಜು ಪಟ್ಟಿ ತಯಾರಿಸಿ ವಿಭಾಗಿಯ ಕಛೇರಿಗೆ ಸಲ್ಲಿಸುವಂತೆ ಶಾಖಾಧಿಕಾರಿಗಳಿಗೆ ತಿಳಿಸಲಾಯಿತು. |
| 10.ತಮ್ಮಣ್ಣ ಕರೋಟಿ ಫೋನ್ ನಂ:-9980001691 ರವರು ಮಾತನಾಡಿ ಗಾಂಧಿನಗರದಿಂದ ಹೆಗ್ಗಡಹಳ್ಳಿ ವರೆಗೆ ಸುಮಾರು 27 ಕಿ.ಮೀ ನಷ್ಟು Reconductoring ಆಗದೇ ಸುಳ್ಳು ಲೆಕ್ಕ ನೀಡಿ ಬಿಲ್ ಪಡೆದಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ | ಶಾಖಾಧಿಕಾರಿಗಳು ವಿಠಲಾಪುರ | ಉಪವಿಭಾಗದಲ್ಲಿ ಯಾವುದೇ ಕಾಮಗಾರಿ ನಡೆಯದೇ ಬಿಲ್ ನೀಡಿರುವುದಿಲ್ಲ ಹಾಗೂ ಹಾಗೇನಾದರೂ ಕಾಮಗಾರಿ ನಡೆಯದೇ ಬಿಲ್ ನೀಡಿರುವುದಕ್ಕೆ ಸೂಕ್ತ ದಾಖಲಾತಿ ನೀಡಿದ್ದಲ್ಲಿ ಸಂಬಂಧ ಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. |

Scanned by CamScanner

| | | |
|---|---|---|
| 11.ರಾಜೇಗೌಡ ಮುದಿಗೆರೆ ಫೋನ್ ನಂ:-9901704430 ರವರು ಮಾತನಾಡಿ ರೈತರಿಗೆ ಹಗಲು ಸಮಯದಲ್ಲಿ 4 ಗಂಟೆ ಹಾಗೂ ರಾತ್ರಿ ಸಮಯದಲ್ಲಿ 3 ಗಂಟೆ ವಿದ್ಯುತ್ ನೀಡುತ್ತಿರುವುದರ ಬದಲು ಪಕ್ಕದ ಚನ್ನರಾಯಪಟ್ಟಣ ವಿಭಾಗದಲ್ಲಿ ಹಗಲು ಸಮಯದಲ್ಲಿ 7 ಗಂಟೆ ವಿದ್ಯುತ್ ನೀಡುತ್ತಿರುವಂತೆ ನಮಗೂ ಸಹ ಹಗಲು ಸಮಯದಲ್ಲಿ 7 ಗಂಟೆ ವಿದ್ಯುತ್ ನೀಡಬೇಕೆಂದು ಕೋರಿರುತ್ತಾರೆ. | ---- | ನಮ್ಮ ವಿಭಾಗ ವ್ಯಾಪ್ತಿಯಲ್ಲಿ ಹಗಲು ಸಮಯದಲ್ಲಿ 7 ಗಂಟೆ ವಿದ್ಯುತ್ ನೀಡಲು ಫೀಡರ್‌ಗಳು ಹಾಗೂ ವಿತರಣಾ ಕೇಂದ್ರದ ಪರಿವರ್ತಕಗಳು Over Load ಆಗುವುದರಿಂದ ಹಗಲು ಮತ್ತು ರಾತ್ರಿಯ ಸಮಯದಲ್ಲಿ ವಿದ್ಯುತ್ ಸರಬರಾಜು ನೀಡಲಾಗುತ್ತಿದೆ ಎಂದು ತಿಳಿಸಲಾಯಿತು. |
| 12.ಲಿಂಗೇಗೌಡ ನಾರ್ಗೋನಹಳ್ಳಿ ಫೋನ್ ನಂ:-9164009673 ರವರು ಮಾತನಾಡಿ ಇಲ್ಲಿ ಅಳವಡಿಸಿರುವ ತಂತಿಗಳು ತುಂಬಾ ಹಳೆಯದಾಗಿರುವುದರಿಂದ ಹಲವಾರು ಭಾರಿ ತುಂಡಾಗಿ ಬೀಳುತ್ತಿರುವುದರಿಂದ ತಕ್ಷಣವೇ ತಂತಿಯನ್ನು ಬದಲಾಯಿಸುವಂತೆ ಕೋರಿರುತ್ತಾರೆ. | ಶಾಖಾಧಿಕಾರಿಗಳು ವಿಠಲಾಪುರ | ಸದರಿಯವರ ದೂರು ಸಂಬಂಧ ಸ್ಥಳ ಪರಿಶೀಲಿಸಿ ಹಾಲಿ ಇರುವ ವಾಹಕವನ್ನು ಬದಲಾಯಿಸಲು ಅಂದಾಜು ಪಟ್ಟಿ ತಯಾರಿಸಿ ವಿಭಾಗಿಯ ಕಛೇರಿಗೆ ಸಲ್ಲಿಸುವಂತೆ ಶಾಖಾಧಿಕಾರಿಗಳಿಗೆ ತಿಳಿಸಲಾಯಿತು. |
| 13.ನಗರೂರು ಕುಮಾರ್ ಫೋನ್ ನಂ:-9740708952 ಮಾತನಾಡಿ ಇದುವರೆಗೆ ನಮ್ಮ ತಾಲ್ಲೋಕಿನಲ್ಲಿ ಸುಟ್ಟಿರುವ ಕಬ್ಬಿಗೆ ಯಾವುದೇ ಪರಿಹಾರ ನೀಡಿರುವುದಿಲ್ಲ ತಕ್ಷಣ ದಾಖಲೆಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವಂತೆ ಕೋರಿರುತ್ತಾರೆ. | ಶಾಖಾಧಿಕಾರಿಗಳು ಶೀಳನೆರೆ | ಸದರಿಯವರ ದೂರು ಸಂಬಂಧ ಸ್ಥಳ ಪರಿಶೀಲಿಸಿ ವಿದ್ಯುತ್ ಪರಿವೀಕ್ಷಕರಿಗೆ ಮಾಹಿತಿ ನೀಡಿ ಸಂಬಂಧ ಪಟ್ಟ ಎಲ್ಲಾ ದಾಖಲಾತಿಪಗಳನ್ನು ಸಂಬಂಧ ಪಟ್ಟ ಅಧಿಕಾರಿಗಳಿಗೆ ಸಲ್ಲಿಸಲಾಗುವುದೆಂದು ತಿಳಿಸಲಾಗಿದೆ. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ & ಪಾಲನಾ ಉಪವಿಭಾಗ
ಸೆಸ್ಕ್
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಚಾ.ವಿ.ಸ.ನಿ.ನಿ.
ಗ್ರಾಮಾಂತರ ಉಪವಿಭಾಗ-1, ಕೃಷ್ಣರಾಜಪೇಟೆ

ಪ್ರತಿಗಳು:

1.ಅಧೀಕ್ಷಕ ಇಂಜಿನಿಯರ್ (ವಿ) ಕಾ ಮತ್ತು ಪಾ ವೃತ್ತ ಮಂಡ್ಯ ರವರ ಅಹವಾಗನೆಗೆ.
2.ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಕಾ ಮತ್ತು ಪಾ ವಿಭಾಗ ಕೆ.ಆರ್.ಪೇಟೆ
3.ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಉ.ಪ-1 ಕೆ.ಆರ್.ಪೇಟೆ

Scanned by CamScanner